ಟಿಬೇಟಿಯನ್ ಹಾಗೂ ಶ್ರೀಲಂಕಾ ನಿರಾಶ್ರಿತರಿಗೆ ರಾಜ್ಯದಲ್ಲಿ ಒದಗಿಸಿರುವ ಪುನರ್ವಸತಿ ಬಗ್ಗೆ

೨೨೮. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಟಿಬೇಟಿಯನ್ ಹಾಗೂ ಶ್ರೀಲಂಕಾ ನಿರಾಶ್ರಿತರ ಪುನರ್ ವಸತಿಗಾಗಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವ್ಯವಸ್ಥೆ ಮಾಡಲಾಗಿದೆ ಹಾಗೂ ರಾಜ್ಯ ಸರ್ಕಾರ ನೀಡಿರುವ ಸೌಲ್ಕಭ್ಯಗಳೇನು

ಆ) ಮೇಲ್ಕಂಡ ನಿರಾಶ್ರಿತರ ಪುನರ್ವಸತಿಗಾಗಿ ಕೇಂದ್ರ ಸರ್ಕಾರ ನೀಡಿರುವ ಸಹಾಯದ ವಿವರಗಳೇನಂ ?

ಇ) ರಾಜ್ಯದಲ್ಲಿ ಹೊಸತಾಗಿ ಶ್ರೀಲಂಕಾ ನಿರಾಶ್ರಿತರಿಗೆ ಪುನರ್ವಸತಿ ವ್ಯವಸ್ಥೆ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಇಲಾಖೆ ಮಂತ್ರಿಗಳು).—

ಅ) ಮೈಸೂರು ಜಿಲ್ಲೆಯ ಬೈಲಕುಪ್ಪೆ, ಗುರುಪುರ ಮತ್ತು ಕೊಳ್ಳೇಗಾಲ, ಉತ್ತರ ಕನ್ನಡ ಜಿಲ್ಲೆ ಮುಂಡಗೋಡು – ಟಿಬೇಟನ್ ನಿರಾಶ್ರಿತರು. ರಾಯಚೂರು ಜಿಲ್ಲೆ ಸಿಂಧನೂರು ಶಿಬಿರ– ಶ್ರೀಲಂಕಾ ನಿರಾಶ್ರಿತರು. ದಕ್ಷಿಣ ಕನ್ನಡ ಜಿಲ್ಲೆ, ಸೂಳ್ಯ ಮತ್ತು ಸುಬ್ರಹ್ಮಣ್ಯ ರಬ್ಬರ್ ತೋಟಗಳಲ್ಲಿ ಶ್ರೀಲಂಕಾ ಮತ್ತು ಬರ್ಮಾ ನಿರಾಶ್ರಿತರಿಗೆ ಉದ್ಯೋಗ.

ರಾಜ್ಯ ಸರ್ಕಾರದಿಂದ ಪುನರ್ವಸತಿ ಅಂಗವಾಗಿ ಸದರಿ ನಿರಾಶ್ರಿತರಿಗೆ ಲೀಸ್ ಆಧಾರದ ಮೇಲೆ ವ್ಯವಸಾಯಂ ಮಾಡಲು ಜಮೀನನು ಮತ್ತು ಕುಡಿಯುವ ನೀರು ಪೂರೈಕೆ ಮಾಡಿದೆ.

ಆ) ವಾಸಕ್ಕೆ ಮನೆ, ವಿದ್ಯುತ್ ದೀಪ, ಕುಡಿಯುವ ನೀರು ಪೂರೈಕೆ, ರಸ್ತೆ ವ್ಯವಸ್ಥೆಯನ್ನು ಮಾಡಿದೆ. ಕರಕುಶಲ ಕೈಗಾರಿಕೆ ಮತ್ತು ಶಾಲೆಗಳ ವ್ಯವಸ್ಥೆ ಆಗಿದೆ ಹಾಗೂ ಟಿಬೇಟನ್ ನಿರಾಶ್ರಿತರ ಶಿಬಿರದ ಮಾನ್ಯೂಲಿಕರಣಗೊಳಿಸುವ (ನಾರ್ಮಲೈಸೇಷನ್) ಯೋಜನೆಯಡಿ ಆಗಬೇಕಾದ ಕೆಲಸಗಳ ಬಗ್ಗೆ ರಾಜ್ಯ ಸರ್ಕಾರದಿಂದ ಮಾಹಿತಿ ಪಡೆದು ಕೇಂದ್ರ ಸರ್ಕಾರ ರೂ. ೧೫೯.೫೪ ಲಕ್ಷ ಹಣ ಮಂಜೂರು ಮಾಡಿದೆ.

ಇ) ಇಲ್ಲ.

ಕರ್ನಾಟಕ ಆಡಳಿತ ನ್ಯಾಯಂ ಮಂಡಲಿಯಂ ಕಾರ್ಯ್ಯ ವ್ಯಾಪ್ತಿಯ ಬಗ್ಗೆ

೧೬. ಶ್ರೀ ಬಿ. ರಮಾನಾಥ್ ರೈ (ಬಂಟ್ವಾಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದಿಂದ ಧನ ಸಹಾಯ ಪಡೆಯುವ ಮಂಡಳಿಗಳು, ನಿಗಮಗಳು, ಮತ್ತು ವಿಶ್ವವಿದ್ಯಾನಿಲಯಗಳು ನೌಕರರು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಕಾರ್ಯ್ಯವ್ಯಾಪಿಗೆ ಒಳಪಟ್ಟಿರುವರೇ

ಆ) ಇಲ್ಲದಿದ್ದಲ್ಲಿ, ಇವರನ್ನು ಈ ಕಾರ್ಯ್ ವ್ಯಾಪ್ತಿಗೆ ಒಳಪಡಿಸುವ ಪ್ರಸ್ತಾವನೆಯಂ ಸರ್ಕಾರದವರ ಮುಂದಿದೆಯೇ .

ಇ) ಇದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಇಲ್ಲ

ಆ) ಇದೆ.

ಇ) ಪರಿಶೀಲಿಸಲಾಗುತ್ತಿದೆ.